'ಹ್ಞೂಂ'

'ನಿಧಿ ನಿನ್ನ ಮತ್ತು ಪ್ರದೀಪ್‌ನ ಮಗಳು. ಈಗ ಆಕೆಗೆ ಎಷ್ಟು ವರ್ಷ?'

'ಒಂದೂ ಕಾಲು ವರ್ಷ ನನ್ನ ಮಗಳಿಗೆ'.

'ನಿನ್ನ ಮಗಳು ನಿನ್ನ ಹಾಗೇ ತುಂಬಾ ಚಂದವಾಗಿದ್ದಾಳೆ. ಮುದ್ದು ಮಗಳು ಅವಳು, ಅಲ್ವಾ?'

'ಹೌದು'

'ನಿನ್ಗೆ ಆ ಮಗುವಿನ ತಾಯಾಗಿ ಏನನ್ನಿಸುತ್ತೆ? ನಿನ್ನ ಮಗುವನ್ನು ನೀನು ತುಂಬಾ ಪ್ರೀತಿಸ್ತೀಯಾ?'

'ಹೌದು. ನಾನು ತಾಯಿಯಲ್ಲವೇ? ಆ ಮಗುವನ್ನು ನನ್ನಷ್ಟು ಪ್ರೀತಿಸುವವರು ಈ ಜಗತ್ತಿನಲ್ಲೇ ಯಾರೂ ಇಲ್ಲ. ಅಷ್ಟು ಪ್ರೀತಿಸ್ತೀನಿ.'

'ನಿನ್ನ ಮಗಳಿಗೆ ಯಾರಾದರೂ ಹಾನಿ ಮಾಡಲು ಬಂದರೆ?' ಡಾ. ರೂಪಾರ ಪ್ರಶ್ನೆಗೆ ನಿವೇದಿತಾಳ ಮುಖ, ಮೈ ಬಿಗಿಯಾಯಿತು. ಧ್ವನಿಯಲ್ಲಿ ರೋಷ ಮೂಡಿ, 'ಅವರನ್ನು ನಾನು ಸುಮ್ಮನೆ ಬಿಡುವುದಿಲ್ಲ. ಅದಕ್ಕೇ ನಾನು ನನ್ನ ಮಗುವನ್ನು ರಕ್ಷಿಸುವುದು. ಈ ಗಂಡಸರನ್ನು ನಂಬಲು ಆಗುವುದಿಲ್ಲ. ನಮ್ಮ ಎಚ್ಚರದಲ್ಲಿ ನಾವಿರಬೇಕಲ್ಲವೇ? ಅದಕ್ಕೋಸ್ಕರನೇ ನನ್ನ ಮಗುವನ್ನು ನಾನು ಯಾರ ಕೈಗೂ ಕೊಡುವುದಿಲ್ಲ. ಯಾರಾದರೂ ಬಂದರೆ ಮುಚ್ಚಿಟ್ಟು ಬಿಡುತ್ತೇನೆ. ಯಾರ ಕಣ್ಣಿಗೂ ನನ್ನ ಮಗಳು ಬೀಳಬಾರದು.'

ನಿವೇದಿತಾಳನ್ನು ಮನೆಗೆ ಕಳಿಸಿದಾಗ ನಿಧಿ ಮಂಚದ ಕೆಳಗಿನ ಟಬ್‌ನಲ್ಲಿ ಮುಚ್ಚಿಟ್ಟದ್ದು ಈಕೆಯೇ ಎಂದು ಈಗ ಡಾ. ರೂಪಾರಿಗೆ ಸ್ಪಷ್ಟವಾಯಿತು.

'ನಿನಗೇನು ಭಯ ಇದೆ? ಯಾಕೆ ಮಗುವನ್ನು ಅಷ್ಟು ಕಾಳಜಿ ಮಾಡುತ್ತೀಯಾ?'

'ಅದಕ್ಕೆ ಏನಾದರೂ ಆದರೆ? ಯಾರಾದರೂ ಏನಾದರೂ ಮಾಡಿದರೆ ಎನ್ನುವ ಭಯ ನನಗೆ. ನಿಧಿಗೆ ಏನಾದರೂ ಆದರೆ ನಾನು ಜೀವಸಹಿತ ಉಳಿಯುವುದಿಲ್ಲ. ನನ್ನ ಮಗುವಿಗೆ ಏನೂ ಆಗಬಾರದು. ಆಗುತ್ತದೇನೋ ಅನ್ನುವ ಭಯ ನನಗೆ. ಅಂಥ ಘೋರ ಆಘಾತ ಅವಳ ಮೇಲೆ ಜರುಗುವ ಮುನ್ನ ಆ ಮಗುವೂ ಹೋಗಲಿ. ನಂತರ ನಾನೂ ಸಾಯುವೆ. ನನಗೆ ಏನೇನೋ ವಿಪರೀತ ಭಯ ಕಾಡಿ, ಆ ಘೋರ ನನ್ನ ಮಗುವಿಗೆರಗುವುದು ಬೇಡ ಎಂದೇ ನಾನು ಮಗುವಿಗೆ ಏನೋ ಮಾಡಲು ಹೋಗಿದ್ದೆ. ನನ್ನ ಮಗು ಏನೂ ಕೆಟ್ಟದ್ದನ್ನು ಅನುಭವಿಸಬಾರದು. ಅವಳು ಸುರಕ್ಷಿತವಾಗಿರಬೇಕು' — ನಿವಿಯ ಮುಖ ಭಾವದಲ್ಲಿ ನೋವು ಆವರಿಸಿತು. ದನಿ ಗದ್ಗದವಾಯಿತು. ಕಂಬನಿ ಜಾರಿ ಕೆನ್ನೆಗಳ ಮೇಲುರುಳಿತು.

ಪ್ರದೀಪ, ನಿವಿಯೇ ಮಗುವನ್ನು ಉಸಿರುಗಟ್ಟಿಸಿ ಸಾಯಿಸಲೆತ್ನಿಸಿದ್ದನ್ನು ಕಣ್ಣಾರೆ ನೋಡಿದೆ ಎಂದು ಹೇಳಿಕೊಂಡ ಘಟನೆಯ ಹಿನ್ನೆಲೆಯ ಕಾರಣ ಈಗ ಡಾ. ರೂಪಾರಿಗೆ ಉತ್ತರ ದೊರಕಿತ್ತು.

ನಿವಿಯ ಹೃದಯದಲ್ಲಿ ಭೀತಿಯ ಮೋಡ ಮುಸುಕಿದೆ. ಆ ಕಾರಣಕ್ಕೆ ಆಕೆ ವಿಪರೀತವಾಗಿ ಆತಂಕಕ್ಕೊಳಗಾಗಿ ಏನೇನೋ ವಿಪರೀತವಾಗಿ ಕಲ್ಪಿಸಿಕೊಂಡು ದುರ್ಘಟನೆ ಸಂಭವಿಸುವುದು ಬೇಡವೆಂದು ಯೋಚಿಸಿ ಆ ಹೆಜ್ಜೆ ಇರಿಸಿದ್ದಾಳೆ!

'ಹಾಗೆ ಕೆಟ್ಟದ್ದು ಜರುಗೇ ಜರಗುತ್ತೆ ಎಂದು ಯಾಕೆ ಅನ್ನಿಸುತ್ತೆ ನಿನಗೆ?'

'ಏಕೆಂದರೆ ಹೊರಗಿನ ಪ್ರಪಂಚ ಸರಿಯಿಲ್ಲ. ಯಾರೂ ನಂಬಿಕೆಗೆ ಅರ್ಹರಲ್ಲ' ನಿವೇದಿತಾ ಕಹಿಯಾಗಿ ನುಡಿದಳು.

'ನಿನಗೆ ಗಂಡು ಮಗು ಹುಟ್ಟಬೇಕೆನ್ನುವ ಆಸೆ ಇತ್ತೇ?'

'ಇಲ್ಲ. ನನಗೆ ಗಂಡು ಮಗು ಬೇಡವೇ ಬೇಡ' ಸ್ವಲ್ಪ ಒರಟಾಗಿ ಬಂದಿತ್ತು ನಿವಿಯ ಉತ್ತರ.

'ಯಾಕೆ?'

'ಏಕೆಂದರೆ ಅದು ಬೆಳೆದು ಮುಂದೆ ಕೆಟ್ಟ ವ್ಯಕ್ತಿಯಾಗುತ್ತದೆ. ಬರೀ ಬೇಡದ ಕೆಲಸಗಳನ್ನು ಮಾಡುತ್ತದೆ. ಹೆಣ್ಣುಮಕ್ಕಳಿಗೆ ತೊಂದರೆ ಕೊಡುತ್ತಾರೆ. ನನಗೆ ಮಕ್ಕಳೇ ಬೇಡವಿತ್ತು. ಆದರೆ ಪ್ರದೀಪನ ಒತ್ತಾಯಕ್ಕೆ ನಾನು ಮಣಿಯಬೇಕಾಯಿತು.'

'ನಿನ್ನಮ್ಮ ನಿನ್ನನ್ನು ನೋಡಿಕೊಂಡ ಹಾಗೆ ನೀನೂ ನಿನ್ನ ಮಗಳು ನಿಧಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದೀಯಾ. ನೀನು ನಿನ್ನ ಅಮ್ಮನ ಹಾಗೆ ಒಳ್ಳೆಯ ತಾಯಿ.'

ನಿವೇದಿತಾ ಉತ್ತರಿಸಲಿಲ್ಲ.

'ಯಾಕೆ ಮೌನ? ನಿನ್ನಮ್ಮ ನಿನ್ನನ್ನು ಚೆನ್ನಾಗಿ ನೋಡಿಕೊಳ್ಳಲಿಲ್ವಾ?'

'ನನ್ಗೆ ಬೇಕೆಂದಾಗ ಆಕೆ ನನ್ನ ಬಳಿ ಇರಲಿಲ್ಲ. ನಾನು ಏನು ಹೇಳಿದರೂ ಅವರು ನನ್ನ ಮಾತು ಕೇಳುವುದಿಲ್ಲ. ಅವರು ಹೇಳಿದ್ದನ್ನು ನಾನು ಕೇಳಬೇಕು. ಇಬ್ಬರೂ ಕೆಲಸಕ್ಕೆ ಹೋಗ್ತಿದ್ರು. ನಾನು ಒಂಟಿಯಾಗಿ ಬಿಡುತ್ತಿದ್ದೆ.'

'ನೀನು ಅದಕ್ಕೇ ನಿಧಿಯನ್ನು ಯಾವತ್ತೂ ಒಂಟಿಯಾಗಿರಲು ಬಿಡುವುದಿಲ್ಲ ಅಲ್ಲವೇ?'

'ಹೌದು. ನನಗೆ ನನ್ನ ಮಗಳ ರಕ್ಷಣೆ ಮುಖ್ಯ. ಅದಕ್ಕೇ ಅವಳನ್ನು ಸದಾ ಎದೆಗವಚಿಕೊಂಡೇ ಇರ್ತೀನಿ.'

ಡಾ. ರೂಪಾ ಸಣ್ಣ ಅಂತರದಲ್ಲಿ ಮೌನಕ್ಕೆ ಮೊರೆ ಹೋದರು.

'ಈಗ ನೀನು ನಲವತ್ತನೆಯ ಮೆಟ್ಟಿಲಿನ ಮೇಲೆ ನಿಂತಿದ್ದೀಯಾ. ನೆನಪಿದೆ ತಾನೇ? ಅಲ್ಲಿಂದ ಮತ್ತೆ ನೀನು ಇನ್ನೂ ಕೆಳಕ್ಕೆ ಹೋಗಲು ಶುರು ಮಾಡುತ್ತೀಯಾ. ಕೆಳಗೆ. ರಿಲ್ಯಾಕ್ಸ್. ರಿಲ್ಯಾಕ್ಸ್. ಕೆಳಗೆ ಇಳಿಯಲು ಶುರು ಮಾಡುತ್ತೀಯಾ. ನಿಧಾನಕ್ಕೆ ಹೆಜ್ಜೆ ಇರಿಸಿ ಕೆಳಗೆ ಆಳಕ್ಕೆ ಇಳಿಯುತ್ತಿದ್ದೀಯಾ. ಅಲ್ಲಿ ನೀನು ಒಂಟಿ. ನಿನ್ನ ಅಕ್ಕಪಕ್ಕ ಯಾರೂ ಇಲ್ಲ. ಮೂವತ್ತೊಂಬತ್ತು, ಮೂವತ್ತೆಂಟು, ಮೂವತ್ತೇಳನೇ ಮೆಟ್ಟಿಲು, ಮೂವತ್ತಾರು, ಕೆಳಗೆ, ಕೆಳಗೆ, ಆಳಕ್ಕೆ.'

ನಿವಿ ಮಂತ್ರಮುಗ್ಧಳಂತೆ ಸ್ಪಂದಿಸುತ್ತಾ ಸುಪ್ತಲೋಕದಲ್ಲಿ ಮನಸ್ಸಿನ ಆಳದಲ್ಲಿದ್ದ ಕಲ್ಪನಾ ಮೆಟ್ಟಿಲುಗಳನ್ನು ಇಳಿಯುತ್ತಿದ್ದಳು.

'ಇಪ್ಪತ್ತನೇ ಮೆಟ್ಟಿಲು. ಇದು ಎರಡನೇ ಹಂತ. ಅಂದರೆ ಕೆಳಗಿನಿಂದ ಇನ್ನು ನೀನು ಕೇವಲ ಇಪ್ಪತ್ತು ಮೆಟ್ಟಿಲುಗಳಷ್ಟು ಮೇಲಿದ್ದೀಯಾ. ಇಲ್ಲಿ ಮತ್ತೆ ನಾನು ನಿನ್ನ ಬಳಿ ಒಂದಷ್ಟು ಪ್ರಶ್ನೆಗಳನ್ನು ಕೇಳುತ್ತೀನಿ ಸರೀನಾ, ಉತ್ತರ ಕೊಡ್ತೀಯಾ?'

'ಹ್ಞೂಂ' ನಿವೇದಿತಾ ಡಾ. ರೂಪಾರ ಮಾತುಗಳಲ್ಲಿ ಎಷ್ಟು ಲೀನಳಾಗಿದ್ದಳೆಂದರೆ ಅವಳು ಮೆಟ್ಟಿಲುಗಳನ್ನಿಳಿದ ದಣಿವಿನಿಂದ ಏದುಸಿರು ಬಿಡುತ್ತಿದ್ದಳು.

'ಸುಧಾರಿಸಿಕೊಂಡೆಯಾ? ಈಗ ಮತ್ತೆ ನಿನ್ನ ನಾನು ಪ್ರಶ್ನಿಸುತ್ತಾ ಹೋಗ್ತೀನಿ ಸರೀನಾ?'

'ಈಗ ನಿಮ್ಮ ಮದುವೆಯ ಸಂದರ್ಭಕ್ಕೆ ಬರೋಣ. ನಿನಗೆ ಪ್ರದೀಪ ಇಷ್ಟ ಆಗಿ ಮದುವೆ ಆಗಿದ್ದಾ ಅಥವಾ ಅಪ್ಪ, ಅಮ್ಮನ ಒತ್ತಾಯಕ್ಕೋ?'

'ಎರಡೂ'

'ಅಂದರೆ?'

'ನನಗೆ ಮದುವೆ ಇಷ್ಟವಿರಲಿಲ್ಲ. ನಾನು ಹಾಗೇ ಇದ್ದು ಬಿಡಬೇಕು ಎಂದುಕೊಂಡಿದ್ದೆ. ಪ್ರದೀಪ ಯಾವ್ದೋ ಮದ್ವೇಲಿ ನನ್ನನ್ನು ನೋಡಿ ಮೆಚ್ಚಿಕೊಂಡು ಮದುವೆ ಪ್ರಸ್ತಾಪ ತಗೊಂಡು ಬಂದರು. ಅವ್ರಿಗೆ ಹಿಂದೆ ಮುಂದೆ ಯಾರೂ ಇರಲಿಲ್ಲ. ಸ್ಥಿತಿವಂತರಾಗಿದ್ದರು. ಈ ಕಾರಣದಿಂದ ಅಪ್ಪ ಅಮ್ಮ ಒಪ್ಪಿದರು.'

'ಮತ್ತೆ ನಿನಗೇಕೆ ಬೇಡ ಎನಿಸಿತ್ತು?'

'ನನಗೆ ಮದುವೇನೆ ಬೇಡವೆಂದುಕೊಂಡಿದ್ದೆ. ಪ್ರದೀಪ ಬಂದು ಮಾತನಾಡಿದಾಗ ಸುಸಂಸ್ಕೃತ ಎನಿಸಿತು. ನನ್ನನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳುತ್ತಾರೆ ಎನಿಸಿತು. ನೋಡಲಿಕ್ಕೂ ಲಕ್ಷಣವಾಗಿದ್ದರು. ನನ್ನ ಒಪ್ಪಿಗೆ ಇದ್ದರೆ ಮಾತ್ರ ಈ ಮದುವೆ ನಡೆಯುತ್ತೆ ಎಂದರು. ಆತ ನನ್ನ ಅಭಿಪ್ರಾಯಕ್ಕೆ ಬೆಲೆಗೊಟ್ಟು ಮಾತನಾಡಿದ ರೀತಿ ಇಷ್ಟವಾಯಿತು. ಅದುವರೆಗೂ ಮದುವೆಯೇ ಬೇಡ ಎಂದುಕೊಂಡಿದ್ದವಳಿಗೆ ಅದೇಕೋ ಪ್ರದೀಪನ ಭೇಟಿಯ ನಂತರ ಮನಸ್ಸು ಬದಲಿಸಿಕೊಳ್ಳಬೇಕೆನಿಸಿತು. ಮೊದಲ ಭೇಟಿಯಲ್ಲೇ ಅವರು ನನಗೆ ಆಪ್ತಭಾವ ಮೂಡಿಸಿದ್ದರು. ಆದರೂ ಒಳಗೆ ಅಳುಕಿತ್ತು. ಒಳ್ಳೆಯ ಮನಸ್ಸಿನ ಹುಡುಗನಿಗೆ ನಾನು ಅರ್ಹಳಲ್ಲ ಎನಿಸಿತ್ತು.'

'ಅದೇಕೆ ನಿನಗೆ ನೀನೇ ಅರ್ಹಳಲ್ಲ ಎನಿಸಬೇಕು? ನೀನು ಕಲಿತವಳು. ಚೆನ್ನಾಗೇ ಇದ್ದೀಯಾ ನೋಡಲು.'

'ಅದಷ್ಟೇ ಮುಖ್ಯ ಅಲ್ಲ ಅಲ್ವಾ? ಎಲ್ಲಾ ವಿಧದಲ್ಲೂ ಅರ್ಹತೆ ಬೇಕು ತಾನೇ? ನಿಮಗೆ ಗೊತ್ತಿಲ್ಲ ನನ್ನ ಬಗ್ಗೆ. ಅವರಿಗೆ ನಾನು ಮೋಸ ಮಾಡುತ್ತಿದ್ದೇನೆನ್ನುವ ಅಳುಕು ನನ್ನಲ್ಲಿತ್ತು. ಅದಕ್ಕೇ ಬೇಡವೆಂದೆ.'

'ನೀನು ಹೇಗೆ ಮೋಸ ಮಾಡಲು ಸಾಧ್ಯ?'

'ಅದು ಹಾಗೇ ಅಂದೆ. ಮದುವೆಗೆ ಮುಂಚೆ ಸ್ವಲ್ಪ ಮುಕ್ತವಾಗಿ ಮಾತನಾಡಬೇಕಿತ್ತು. ನನ್ನ ಬಗ್ಗೆ ಏನೇನೋ ಹೇಳಿಕೊಳ್ಳಬೇಕಿತ್ತು. ಅದೆಲ್ಲಾ ಆಗಲೇ ಇಲ್ಲ.'

'ಯಾಕೆ?'

'ಧೈರ್ಯ ಸಾಲಲಿಲ್ಲ. ಅಲ್ಲದೆ ಸತ್ಯ ಹೇಳಿದರೆ ಅವರು ಮದುವೆ ಬೇಡವೆನ್ನುವರೇನೋ ಎಂಬ ಕಳವಳ ನನ್ನನ್ನು ತಡೆ ಹಿಡಿಯಿತು'

'ಮದುವೆಯ ನಂತರವೂ ಹೇಳಿಕೊಳ್ಳಲಿಲ್ಲವೇ?.'

(ಸಶೇಷ)